# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1262**

**ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್,**
**(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಉತ್ತರಿಸಬೇಕಿದ್ದ ದಿನಾಂಕ : 18.12.2024**

**ಉತ್ತರಿಸುವ ಸಚಿವರು. : ಗೃಹ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಲ್ಲಿಯವರೆಗು ಸಿಐಡಿ ತನಿಖೆಗೆ ವಹಿಸಿದ ಪ್ರಕರಣಾಗಳು ಎಷ್ಟು; (ಪ್ರತಿ ಪ್ರಕರಣಗಳ ಸಂಪೂರ್ಣ ಮಾಹಿತಿ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೂ ಸಿ.ಐ.ಡಿ ತನಿಖೆಗೆ ವಹಿಸಿದ ಪ್ರಕರಣಗಳ ಸಂಪೂರ್ಣ ಮಾಹಿತಿಯ ವಿವರಗಳನ್ನು ಕ್ರಮವಾಗಿ **ಅನುಬಂಧ- ಎ** ಮತ್ತು **ಅನುಬಂಧ - ಬಿ**ರಲ್ಲಿ ಒದಗಿಸಲಾಗಿದೆ. |
| ಆ) | ಯಾವ ಯಾವ ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಸಲ್ಲಿಕೆಯಾಗಿದೆ. ಚಾರ್ಜ್ ಶೀಟ್ ಪ್ರತಿ ನೀಡುವುದು: ಯಾವೆಲ್ಲಾ ಪ್ರಕರಣಗಳು ಇತ್ಯರ್ಥ ವಾಗದೆ ಬಾಕಿ ಉಳಿದಿವೆ; ಇದಕ್ಕೆ ಕಾರಣವೇನು: ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ: (ವಿವರ ನೀಡುವುದು) | ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಂದ ಸಿ.ಐ.ಡಿ ಘಟಕಕ್ಕೆ ವರ್ಗಾವಣೆ ಮಾಡಲಾದ ಸಿ.ಐ.ಡಿ ಪ್ರಕರಣಗಳ ಪ್ರಸ್ತುತ ಹಂತದ ವಿವರಗಳು ಈ ಕೆಳಕಂಡಂತಿವೆ:- |

| ಕ್ರ ಸಂ | ದಾಖಲಾದ ಪ್ರಕರಣಗಳ ಸಂಖ್ಯೆ | ದೋಷಾರೋಪಣಾ ಪಟ್ಟಿ ಸಲ್ಲಿಸಲಾದ ಪ್ರಕರಣಗಳ ಸಂಖ್ಯೆ | ತನಿಖಾ ಹಂತದಲ್ಲಿರುವ ಪ್ರಕರಣಗಳ ಸಂಖ್ಯೆ | ಮುಕ್ತಾಯಗೊಂಡ ಪ್ರಕರಣಗಳ ಸಂಖ್ಯೆ | ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ |
|---|---|---|---|---|---|
| ಕಲಬುರಗಿ ಜಿಲ್ಲೆ | | | | | |
| 1 | 08 | 05 | 01 | 02 | - |
| ಯಾದಗಿರಿ ಜಿಲ್ಲೆ | | | | | |
| 2 | 10 | 08 | 02 | - | - |

| | | |
|---|---|---|
| ಇ) | ಈ ಮೇಲ್ಕಂಡ ಜಿಲ್ಲೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ವ್ಯಾಪಕವಾಗಿ ನಡೆಯುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | **<u>ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ:-</u>**<br><br>1. **ಆನ್‌ಲೈನ್ ದೂರು ನೋಂದಣಿ ವ್ಯವಸ್ಥೆಗಳು:**<br>• ರಾಷ್ಟ್ರೀಯ ಸೈಬರ್ ಕ್ರೈಮ್ ವರದಿ ಪೋರ್ಟಲ್ (NCRP) www.cybercrime.gov.in ಮೂಲಕ ನಾಗರಿಕರು ಸೈಬರ್ ಅಪರಾಧಗಳನ್ನು ಆನ್‌ಲೈನ್‌ನಲ್ಲಿ ವರದಿ ಮಾಡಿ, ದೂರುಗಳ ಸ್ಥಿತಿಯನ್ನು ತಿಳಿಯಬಹುದಾಗಿರುತ್ತದೆ.<br>• 1930 ರಾಷ್ಟ್ರೀಯ ಹೆಲ್ಪ್‌ಲೈನ್ ಮೂಲಕ ಆರ್ಥಿಕ ವಂಚನೆಗಳನ್ನು ಉಚಿತವಾಗಿ ತಕ್ಷಣ ವರದಿ ಮಾಡಿ, NCRP ಪೋರ್ಟಲ್‌ನಲ್ಲಿ ದೂರು ದಾಖಲಿಸಲು ಸಹಾಯ ಪಡೆಯಬಹುದು.<br>• ಸಾರ್ವಜನಿಕರಲ್ಲಿ 1930 ಹೆಲ್ಪ್‌ಲೈನ್ ಹಾಗೂ NCRP ಬಳಕೆಯನ್ನು ಉತ್ತೇಜಿಸಲು ಜಾಗೃತಿ ಅಭಿಯಾನಗಳನ್ನು ನಡೆಸಲಾಗುತ್ತಿವೆ.<br><br>2. **ವಿಶೇಷ ಸೈಬರ್ ಅಪರಾಧ ಪೊಲೀಸ್ ಘಟಕಗಳು ಸ್ಥಾಪನೆ:**<br>a. ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೋಲಿಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.<br>b. ಕರ್ನಾಟಕ ರಾಜ್ಯದಲ್ಲಿ ಒಟ್ಟು 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳು (CCPS) ಕರ್ತವ್ಯ ನಿರ್ವಹಿಸುತ್ತಿವೆ. ಡಿವೈಎಸ್ಪಿ/ಎಸಿಪಿ ರವರು ಸೈಬರ್ ಕ್ರೈಂ ಪೊಲೀಸ್ ಠಾಣೆ SHO ಆಗಿರುತ್ತಾರೆ . ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿರುತ್ತವೆ.<br>c. ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.<br>d. ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಮ್ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕ |

ಚೇರಿ ಆಗಿದ್ದು, ಗುಪ್ತಚರ ಹಂಚಿಕೆ ಹಾಗೂ ಇತರ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.

**3. ಸೈಬರ್ ಫರೆನ್ಸಿಕ್ ಸಾಮರ್ಥ್ಯ:**

a. ಡಿಜಿಟಲ್ ಫೋರೆನ್ಸಿಕ್ ಪ್ರಯೋಗಾಲಯಗಳನ್ನು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.
b. ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫೋರೆನ್ಸಿಕ್ ಲ್ಯಾಬ್‌ನಲ್ಲಿ: ಮೊಬೈಲ್, ನೆಟ್ವರ್ಕ್ ಫೋರೆನ್ಸಿಕ್ಸ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ. Magnet AXIOM, Belka soft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು. ಪ್ರಾದೇಶಿಕ ಫೋರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.

**4. ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ:**

a. ಭಾರತೀಯ ಸೈಬರ್ ಕ್ರೈಮ್ ಸಂಯೋಜನಾ ಕೇಂದ್ರ ವು (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನಕ್ಕೆ ಬೆಂಬಲ ನೀಡುತ್ತದೆ.
b. CERT-In (Computer Emergency Response Team – India) ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ, ಘಟನಾವಳಿಗಳನ್ನು ನಿರ್ವಹಿಸುತ್ತದೆ.
c. Cyber Swachhta Kendra ಮಾಲ್‌ವೇರ್ ಹಾಗೂ ಬಾಟ್‌ನೆಟ್ ಸೋಂಕು ಪತ್ತೆಮಾಡಿ ತೆರವುಗೊಳಿಸಲು ಸಹಾಯ ಮಾಡುತ್ತದೆ.
d. NCIIPC (National Critical Information Infrastructure Protection Centre) ಬ್ಯಾಂಕಿಂಗ್, ಟೆಲಿಕಾಂ, ಇಂಧನ ಹಾಗೂ ರಕ್ಷಣಾ ಮೂಲಸೌಕರ್ಯವನ್ನು ರಕ್ಷಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ.

**5. ಸಾಮರ್ಥ್ಯ ವೃದ್ಧಿ ಮತ್ತು ತರಬೇತಿ:**

a. ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕ ಅಭಿಯೋಜಕರಿಗೆ ಸೈಬರ್ ಕಾನೂನು, ಡಿಜಿಟಲ್ ತನಿಖೆ, ಎಲೆಕ್ಟ್ರಾನಿಕ್ ಸಾಕ್ಷಿಗಳ ಕಾನೂನು ಬದ್ಧತೆ ಕುರಿತಂತೆ ನಿಯಮಿತ ತರಬೇತಿ ನೀಡಲಾಗುತ್ತಿದೆ.
b. 2024ರಲ್ಲಿ 257 ಕ್ಕೂ ಹೆಚ್ಚು ಅಧಿಕಾರಿಗಳು 1,367 ಸೈಬರ್ ಫೋರೆನ್ಸಿಕ್ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ನೀಡಲಾಗುತ್ತಿದೆ.
c. NASSCOM, DSCI, CERT-In ಸಹಯೋಗದೊಂದಿಗೆ ವಿಶೇಷ ತರಬೇತಿ ಪಡೆಯಲಾಗುತ್ತಿದೆ..
d. 2019ರಲ್ಲಿ ಸ್ಥಾಪಿತ CCITR (Centre for Cybercrime Investigation Training & Research) ಡಾರ್ಕ್ ವೆಬ್, ಕ್ರಿಪ್ಟೋಕರೆನ್ಸಿ ಅಪರಾಧಗಳಲ್ಲಿ ಪರಿಣತಿ ತರಬೇತಿ ನೀಡಲಾಗುತ್ತಿದೆ.

6. **ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳು:**

a. ರೇಡಿಯೋ, ಟಿವಿ, ಸಾಮಾಜಿಕ ಜಾಲತಾಣಗಳ ಮೂಲಕ OTP ಸುರಕ್ಷತೆ, ವಂಚನೆ ಎಚ್ಚರಿಕೆ, ಡಿಜಿಟಲ್ ಹೈಜಿನ್ ಕುರಿತು ಪ್ರಚಾರ ಮಾಡಲಾಗುತ್ತಿದೆ.
b. ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ "ಮನೆ ಮನೆಗೆ ಪೊಲೀಸ್" ಕಾರ್ಯಕ್ರಮ ದಡಿಯಲ್ಲಿ ಸಕ್ರಿಯ ಸೇವೆ ಮುಖಾಂತರ ಸೈಬರ್ ಜಾಗೃತಿ ಮೂಡಿಸಲಾಗುತ್ತಿದೆ.
c. ಪ್ರಮುಖ ಮೊಬೈಲ್ ಸರ್ವೀಸ್ ಪ್ರೊವೈಡರ್‌ಗಳ ಮುಖಾಂತರ ಕರೆಗಳು ಸ್ವೀಕರಿಸುವ ಮೊದಲು ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.
d. "Golden Hour" ಎಂದರೆ ಸೈಬರ್ ವಂಚನೆಗೊಳಗಾದ ಹಣ ಬ್ಯಾಂಕ್ ಖಾತೆಗಳ ಮುಖಾಂತರ ಹರಿದು ಆರೋಪಿ ವಶಕ್ಕೆ ತಲುಪುವ ಸಮಯ" ಎಂದು ಹೇಳಲಾಗುತ್ತದೆ. ಇದು ಪ್ರಕರಣದಿಂದ ಪ್ರಕರಣಕ್ಕೆ ಬದಲಾಗುತ್ತದೆ . ವಂಚನೆಗೊಳಗಾದ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ತತ್‌ಕ್ಷಣ ಕಾರ್ಯಪ್ರವೃತ್ತರಾಗಿ ತಡೆಹಿಡಿಯಲು "Golden Hour" ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

7. **ಸಹಯೋಗ ಮತ್ತು ಪಾಲುದಾರಿಕೆಗಳು:**

| | | |
|---|---|---|
| | | a. ಸೈಬರ್ ಗುಪ್ತಚರ ಮಾಹಿತಿ ವಿನಿಮಯ, ತತ್ಕ್ಷಣ ಬ್ಯಾಂಕ್ ವಂಚನೆ ಮೊತ್ತ ಸ್ಥಗಿತಗೊಳಿಸಲು .. ಜಂಟಿಯಾಗಿ ಸೈಬರ್ ವಂಚನೆ ಮತ್ತು ಬೆದರಿಕೆಗೆ ಪ್ರತಿಕ್ರಿಯಿಸಲು ಮತ್ತು ಜಾಗೃತಿ ಮೂಡಿಸಲು ಐಟಿ ಕಂಪನಿಗಳು, ಬ್ಯಾಂಕುಗಳು, ಪೇಮೆಂಟ್ ಸರ್ವಿಸ್ ಪೂರೈಕೆದಾರರೊಂದಿಗೆ MoU ಗಳನ್ನು ಮಾಡಿಕೊಳ್ಳಲಾಗಿದೆ.<br><br>8. **ತಡೆಗಟ್ಟುವ ಮೇಲ್ವಿಚಾರಣೆ**<br><br>a. OSINT ಉಪಕರಣಗಳ ಮೂಲಕ ಹೊಸ ಸೈಬರ್ ಅಪಾಯಗಳ ಕುರಿತು ನಿಗಾ ವಹಿಸಲಾಗಿದೆ.<br>b. ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಲಾಗುವ ಕಾನೂನು ಬಾಹಿರ ವಿಡಿಯೋ, ಫೋಟೋಗಳನ್ನು ತೆಗೆಯಲು IT ಕಾಯ್ದೆಯಡಿ ಕ್ರಮ ಜರುಗಿಸಲಾಗುತ್ತಿದೆ.<br>c. ಸೈಬರ್ ಅಪರಾಧ ಸಹಾಯವಾಣಿಗಳಿಗೆ "Golden Hour" ನಲ್ಲಿ ಬರುವ ದೂರುಗಳನ್ನು ಸ್ವೀಕರಿಸಲು ಕರ್ನಾಟಕ ಪೊಲೀಸ್ ಇಲಾಖೆ 1930 ಹೆಲ್ಪ್‌ಲೈನ್ ಅನ್ನು ವೆಬ್‌ಬಾಟ್ ಸೌಲಭ್ಯದಿಂದ ಉನ್ನತೀಕರಿಸಿದೆ. ಇದರಿಂದ SMS ಮುಖಾಂತರ ಸ್ವಯಂ ಮಾಹಿತಿ ನೋಂದಣಿ ಮಾಡಿಕೊಳ್ಳಬಹುದಾಗಿರುತ್ತದೆ. ದೂರುಗಳನ್ನು "ಹಣಕಾಸು ಮತ್ತು ಹಣಕಾಸೇತರ" ಎಂದು ವಿಂಗಡಿಸುವ IVR ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಹೆಚ್ಚು ಕರೆಗಳು ಬಂದಾಗ ಆಟೋಮೇಟೆಡ್ ಕರೆ ವ್ಯವಸ್ಥೆ ಮೂಲಕ ಧ್ವನಿ ಮಾರ್ಗದರ್ಶನ ಸೌಲಭ್ಯವಿರುತ್ತದೆ. ದೂರುದಾರರು ತಮ್ಮ ದೂರಿನ ಸ್ಥಿತಿ ಹಂತವನ್ನು ತಿಳಿದುಕೊಳ್ಳಬಹುದಾಗಿರುತ್ತದೆ. 24/7 ಕಾಲ್ ಸೆಂಟರ್ ಕರ್ತವ್ಯ ನಿರ್ವಹಿಸುತ್ತಿರುತ್ತದೆ. ಕರೆ ಸ್ವೀಕರಿಸುವ ಸಿಬ್ಬಂದಿಗಳು ಪ್ರತಿದಿನ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ.<br><br>**<u>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಅಪರಾಧ ತಡೆಗಟ್ಟಲು ಕೆಳಕಂಡಂತೆ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.</u>**<br><br>1) National Cyber Crime Reporting Portal (www.cybercrime.gov.in) & 1930 ಮೂಲಕ ಕರೆ ಮಾಡಿ ದೂರನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತದೆ.<br><br>2) Chakshu Portal (www.sancharsaathi.gov.in) ಮೂಲಕ ನಕಲಿ ಕರೆ ಮಾಡುವ ಮೊಬೈಲ್ ಸಂಖ್ಯೆ |

| | | |
|---|---|---|
| | | ಯನ್ನು ಬ್ಲಾಕ್ ಮಾಡಲು ಸದರಿ ಪೋರ್ಟಲ್‌ನ್ನು ಉಪಯೋಗಿಸಲಾಗುತ್ತಿದೆ.<br><br>3) JMIS/CIAR /SAMANVAYA Portal ಮೂಲಕ ಸೈಬರ್ ಅಪರಾಧ ಪ್ರಕರಣಗಳ ಆರೋಪಿತರ ಮಾಹಿತಿ/ಬೇರೆ ರಾಜ್ಯದಲ್ಲಿರುವ / ಜಿಲ್ಲೆಯಲ್ಲಿರುವ ಆರೋಪಿಗಳಿಗೆ ನೋಟಿಸ್/ಸಮನ್ಸ್/ವಾರಂಟನ್ನು ಜಾರಿ ಮಾಡಲು ಉಪಯೋಗಿಸಲಾಗುತ್ತಿದೆ.<br><br>4) ಪ್ರತಿಬಿಂಬ (www.Pratibimba.jkpolice.gov.in) ಇದರ ಸಹಾಯದಿಂದ ಸೈಬರ್ ಅಪರಾಧಿಗಳು ಇರುವ ಸ್ಥಳದ ವಿವರ ಪಡೆದುಕೊಳ್ಳಲಾಗುತ್ತಿದೆ.<br><br>5) Cybersafe (www.cybersafe.gov.in) ಇದರ ಸಹಾಯದಿಂದ IMPS, UPI, AEPS,Card Transaction, ಹಣ ವರ್ಗಾವಣೆಯ ವಿವರಗಳನ್ನು ಪಡೆದುಕೊಳ್ಳಲಾಗುತ್ತಿದೆ.<br><br>6) Cyber Tip Line (www.missingkids.org) ಸಹಾಯದಿಂದ ಸಾಮಾಜಿಕ ಜಾಲತಾಣಗಳಲ್ಲಿ ಅಪ್ರಾಪ್ತ ಮಕ್ಕಳ ಅಶ್ಲೀಲ ದೃಶ್ಯಾವಳಿಗಳನ್ನು ಹಂಚಿಕೊಳ್ಳುವವರನ್ನು ಪತ್ತೆ ಹಚ್ಚಿ ಅಂತಹವರ ವಿರುದ್ಧ ದೂರು ದಾಖಲಿಸಲು ಮತ್ತು ಪತ್ತೆಮಾಡಲು ಬಳಸಿಕೊಳ್ಳಲಾಗುತ್ತಿದೆ. |
| ಈ) | ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಪ್ರತ್ಯೇಕ ತಾಂತ್ರಿಕ ಸಶಕ್ತಿ ವಿಭಾಗಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಇದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮಗಳೇನು: | ಸರ್ಕಾರದ ಆದೇಶ ಸಂಖ್ಯೆ :ಹೆಚ್‌ಡಿ 77 ಇಎಫ್‌ಎಸ್ 2025, ದಿನಾಂಕ: 21/06/2025ರಲ್ಲಿ ಸಿಐಡಿ ಘಟಕದ ಸೈಬರ್ ಕ್ರೈಂ ವಿಭಾಗವನ್ನು ಬಲಪಡಿಸಲು ಅವಶ್ಯವಿರುವ ಉಪಕರಣಗಳನ್ನು ರೂ.5.00 ಕೋಟಿಗಳಲ್ಲಿ ಖರೀದಿಸಲು ಕ್ರಿಯಾ ಯೋಜನೆಗೆ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದಿಂದ ನೀಡಲಾಗಿರುತ್ತದೆ.<br><br>ಸೈಬರ್ ವಂಚನೆ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ತನಿಖೆಮಾಡಿ ಸಾರ್ವಜನಿಕರಿಗೆ ಅಕ್ರಮನಷ್ಟ ತಪ್ಪಿಸುವ ಸಲುವಾಗಿ ರಾಜ್ಯದಲ್ಲಿ ಹೊಸದಾಗಿ 43 CCPS |

| | | |
|---|---|---|
| | | ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿದ್ದು, ಗುಣಮಟ್ಟದ ತನಿಖೆಯನ್ನು ಖಚಿತಪಡಿಸುವ ಸಲುವಾಗಿ ಡಿವೈ.ಎಸ್.ಪಿ ದರ್ಜೆಯ ಅಧಿಕಾರಿಗಳನ್ನು ಎಸ್.ಹೆಚ್.ಓಗಳನ್ನಾಗಿ ಮಾಡಲಾಗಿದೆ. |
| ಉ) | ಜನಸ್ನೇಹಿ ಪೊಲೀಸ್ ಕ್ಯೂ ಆರ್ ಕೋಡ್ ಅಡಿಯಲ್ಲಿ ಬಂದ ದೂರುಗಳು ಎಷ್ಟು: ಎಷ್ಟು ದೂರುಗಳನ್ನು ವಿಲೇವಾರಿ ಮಾಡಲಾಗಿದೆ? (ತಿಂಗಳು ಮತ್ತು ಪೊಲೀಸ್ ಠಾಣೆವಾರು ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಜನಸ್ನೇಹಿ ಪೊಲೀಸ್ ಕ್ಯೂಆರ್‌ಕೋಡ್ ಅಡಿಯಲ್ಲಿ ಸಾರ್ವಜನಿಕರು ಪೊಲೀಸ್ ಠಾಣೆಗೆ ಭೇಟಿ ನೀಡಿ ತಮ್ಮ ಸಮಸ್ಯೆಗಳ ಬಗ್ಗೆ ಪೊಲೀಸ್‌ರು ಯಾವ ರೀತಿಯಲ್ಲಿ ಸ್ಪಂದನೆ ಮಾಡಿರುತ್ತಾರೆ ಎಂಬ ಬಗ್ಗೆ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ ಸ್ಪಂದನೆ ಕುರಿತು **FEEDBACK RANKING** (1 ರಿಂದ 5) ನೀಡಿದ ಬಗ್ಗೆ ಪ್ರಸ್ತುತ ಸಾಲಿನ ಮಾಹಿತಿ ಪಡೆದುಕೊಂಡು ಪರಿಶೀಲಿಸಿ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಉತ್ತಮಗೊಳಿಸಲಾಗುತ್ತಿದೆ. ದೂರುಗಳ ವಿವರಗಳನ್ನು **ಅನುಬಂಧ-ಸಿ** ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಹೆಚ್‌ಡಿ 69 ಎಸ್‌ಡಿಎನ್ 2024

(ಪ್ರಿಯಾಂಕ್ ಖರ್ಗೆ)

ಗೃಹ ಸಚಿವರು

# ಅನುಬಂಧ- ಎ

**ಕಲಬುರಗಿ ಜಿಲ್ಲೆಯ ಸಿ.ಐ.ಡಿ ತನಿಖೆಗೆ ವಹಿಸಿದ ಪ್ರಕರಣಗಳ ವಿವರಗಳು:**

| ಕ್ರ ಸಂ | ಪೊಲೀಸ್‌ಠಾಣೆ ಮೊಕದ್ದಮೆ ಸಂಖ್ಯೆ ಮತ್ತು ಕಲಂ ಗಳು | ಪ್ರಕರಣ ದಾಖಲಾದ ದಿನಾಂಕ | ಪ್ರಕರಣವು ಸಿಐಡಿಗೆ ವರ್ಗಾವಣೆಯಾದ ಆದೇಶ ಮತ್ತು ದಿನಾಂಕ | ಷರಾ |
|---|---|---|---|---|
| 01 | ಸಿ.ಇ.ಎನ್ ಪೊಲೀಸ್ ಠಾಣೆ ಗುನ್ನೆ ನಂ 20/2022 ಕಲಂ 406 409 420 ಸಂ 149 ಐ.ಪಿ.ಸಿ | 21-09-2022 | ಮಾನ್ಯ ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನೀರಿಕ್ಷಕರು ಕರ್ನಾಟಕ ರಾಜ್ಯ ನೃಪತುಂಗ ರಸ್ತೆ ಬೆಂಗಳೂರು ರವರ ಕಚೇರಿ ಪರಿಷ್ಕೃತ ಸ್ಥಾಯಿ ಆದೇಶ ಸಂಖ್ಯೆ 1006 ದಿ:20-09-2022 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |
| 02 | ಕಾಳಗಿ ಪೊಲೀಸ್ ಠಾಣೆ ಗುನ್ನೆ ನಂ.79/2022 ಕಲಂ-406,409,420 ಸಂ.34 ಐಪಿಸಿ | 09-12-2022 | ಆದೇಶ ಸಂಖ್ಯೆ-1006 ದಿನಾಂಕ:20-09-2022 | ದಾಖಲಾತಿ ಸಂಗ್ರಹ ಮತ್ತು ಸಾಕ್ಷಿ ವಿಚಾರಣೆ ಕುರಿತು ತನಿಖೆಯಲ್ಲಿದೆ. |
| 03 | ನೆಲೋಗಿ ಪೊಲೀಸ್‌ಠಾಣೆಗುನ್ನೆ ನಂ 69/2023 ಕಲಂ 333.379.307.302.504.506 ಸಂ 149 ಐಪಿಸಿ 3(1)(ಆರ್)2 (ವಿ)ಎಸ್.ಸಿ/ಎಸ್.ಟಿ ಪಿ.ಎ ಆಕ್ಟ | 16-06-2023 | ಸರ್ಕಾರದಆದೇಶ ಸಂಖ್ಯೆ ಹೆಚ್.ಡಿ 58 ಸಿಒಡಿ 2023 ಬೆಂಗಳೂರ ದಿನಾಂಕ 20-07-2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |
| 04 | ನೆಲೋಗಿ ಪೊಲೀಸ್‌ಠಾಣೆಗುನ್ನೆ ನಂ 70/2023 ಕಲಂ 353. 307. 504 ಐಪಿಸಿ | 18-06-2023 | ಸರ್ಕಾರದಆದೇಶ ಸಂಖ್ಯೆ ಹೆಚ್.ಡಿ 58 ಸಿಒಡಿ 2023 ಬೆಂಗಳೂರ ದಿನಾಂಕ 20-07-2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |
| 05 | ಮಾಡಬೂಳ ಪೊಲೀಸ್ ಠಾಣೆ ಗುನ್ನೆ ನಂ 71/2023 ಕಲಂ 323, 306, 307, 504, 506 ಸಂ/34 ಐಪಿಸಿ | 20/07/2023 | ಮಾನ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು ಬೆಂಗಳೂರ ರವರ ಈ ಮೈಲ್ ಆದೇಶ ಸಂ ಸಿ.ಆರ್.ಎಮ್-5/55/ಕಲಬುರಗಿ/2023 ದಿನಾಂಕ 26-09-2023 | ದಿ:17/09/2024 ರಂದು 'ಬಿ' ಅಂತಿಮ ವರದಿ ಸಲ್ಲಿಸಲಾಗಿದೆ. ಫಿರ್ಯಾದಿಗೆ ನೋಟೀಸ್ ಜಾರಿ ಹಂತದಲ್ಲಿರುತ್ತದೆ |
| 06 | ದೇವಲಗಾಣಗಾಪೂರ ಠಾಣೆ ಗುನ್ನೆ ನಂ. 138/2023 ಕಲಂ 143 147 148 120(ಬಿ) 302 ಸಂ 149 ಐಪಿಸಿ | 13/10/2023 | ಮಾನ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು ಬೆಂಗಳೂರು ರವರ ಜ್ಞಾಪನ ಪತ್ರ ಸಂಖ್ಯೆ:ನಂ.ಎಲ್&ಓ/5/67/2023-24 ದಿನಾಂಕ:20.10.2023. | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |
| 07 | ಸುಲೆಪೇಟ ಪೊಲೀಸ್‌ಠಾಣೆಯು.ಡಿ.ಆರ್ ನಂ. 19/2023 ಕಲಂ. 174 ಸಿಆರ್‌ಪಿಸಿ | 19-10-2023 | ಮಾನ್ಯ ಪೊಲೀಸ್ ಮಹಾನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಸಿಐಡಿ ಕಾರ್ಲ್ಟನ್ ಭವನ, ಅರಮನೆರಸ್ತೆ ಬೆಂಗಳೂರು ರವರ ಆದೇಶ ಸಂ. | ಯು.ಡಿ.ಆರ್ ಪ್ರಕರಣವು ಮುಕ್ತಾಯ ವಾಗಿರುತ್ತದೆ. ಎಂಎಜಿ ನಂ: 01/2023-24 |

| | | | | |
|---|---|---|---|---|
| | | | 26/ಅಪರಾಧ/ಹೆಚ್&ಬಿ/ಸಿಐಡಿ/2023 ದಿನಾಂಕ:24-10-2023. | ದಿನಾಂಕ:06/03/2024 ರಂದು ಅಂತಿಮ ವರದಿ ಅಂಗಿಕೃತಗೊಂಡಿರುತ್ತದೆ. |
| 08 | ಅಫಜಲಪೂರ ಠಾಣೆ ಗುನ್ನೆ ನಂ. 267/2023 ಕಲಂ 109 114 120(ಬಿ) 420 34 36 37 ಸಂ. 149 ಐಪಿಸಿ | 28/10/2023 | ಮಾನ್ಯ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು ಬೆಂಗಳೂರು ರವರ ಜ್ಞಾಪನ ಪತ್ರ ಸಂಖ್ಯೆ: ಎಡಿಜಿಪಿ/ಕಾ&ಸೂ/11/ಕಲಬುರಗಿ/2023-24 ದಿನಾಂಕ-11-11-2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

# ಅನುಬಂಧ-ಬಿ

**ಯಾದಗಿರಿ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಸಿ.ಐ.ಡಿ ತನಿಖೆಗೆ ವಹಿಸಿದ ಪ್ರಕರಣಗಳ ವಿವರಗಳು:**

| ಕ್ರ ಸಂ | ಠಾಣೆಯ ಹೆಸರು | ಗುನ್ನೆ ನಂ ಮತ್ತು ಕಲಂ | ಫಿರ್ಯಾದಿ ಹೆಸರು | ಆರೋಪಿತರ ಹೆಸರು | ಸಂಕ್ಷಿಪ್ತ ಸಾರಾಂಶ | ಸಿ.ಐ.ಡಿ ಗೆ ಕಳುಹಿಸಿದ ದಿನಾಂಕ | ಪ್ರಕರಣದ ಸದ್ಯದ ಹಂತ ಸಿ.ಸಿ/ಇತರೆ ನಂ: ವಿಚಾರಣೆ ದಿನಾಂಕ |
|---|---|---|---|---|---|---|---|
| 1 | ಸಿ.ಇ.ಎನ್ ಪೊಲೀಸ್ ಠಾಣೆ ಯಾದಗಿರಿ | ಗುನ್ನೆ ನಂ: 07/2024 120(ಬಿ) 417, 420 IPC25.03.2024 | ಶ್ರೀಮತಿ ಶ್ರೀ ಮಹಮ್ಮದ್ ಯುಸೂಫ್ ತಂದೆ ಬಶೀರ್ ಪಟೇಲ್ ವ॥ 33 ವರ್ಷ ಜಾ॥ ಮುಸ್ಲಿಂ ಉ॥ ವ್ಯವಹಾರ ಸಾ॥ ಗೋಗಿ (ಕೆ) ತಾ॥ ಶಹಾಪುರ | 1) ಮಹಮ್ಮದ್ ಫೈಜಾನ್ ಸಾ: ದೆಹಲಿ2) ಮುಖೇಶ ಕುಮಾರ ತ್ಯಾಗಿ ಸಾ: ದೆಹಲಿ 3) ಅನೀಲ್ ಜಾಧವ್ ಸಾ: ಮುಂಬೈ 4) ಆನಂದ ತಾವಡೆ ಸಾ:ಮುಂಬೈ | ಫಿರ್ಯಾದಿದಾರರು ವೇದಿಕ್ ಆಯುರ್ಕ್ಯೂರ್ ಹೆಲ್ತ್ ಅಂಡ್ ರಿಟೇಲ್ಸ್ ಪ್ರೈವೇಟ್ ಲಿಮಿಟೆಡ್" ಹಾಗೂ Axis E-Coroporation Pvt. Ltd. Delhi ಕಂಪನಿಯ ಶಹಾಪೂರ ಪಟ್ಟಣದಲ್ಲಿ ಸೂಪರ್ ಬಜಾರ್ ಫ್ರಾಂಚೈಸಿ ಪಡೆಯಲು ಈ ಮೇಲ್ಕಂಡ ಕಂಪನಿಯ ಖಾತೆಗೆ 25,00,000/-ರೂ ಹಣ ಹೂಡಿಕೆ ಮಾಡಿದ್ದು ಮತ್ತು ಕಿರಾಣಿ ವಸ್ತುಗಳ ಮೇಲೆ ಶೇ.33% ರಿಯಾಯಿತಿ ದರದ 13,50,000/-ರೂ ಹೀಗೆ ಒಟ್ಟು 38,50,000/- ರೂಪಾಯಿಗಳನ್ನು ಈ ಮೇಲ್ಕಡ ಕಂಪನಿಯವರು ಫಿರ್ಯಾದಿದಾರರಿಗೆ ಮರಳಿ | ಮಾನ್ಯ ಪೊಲೀಸ್ ಬೆಂಗಳೂರು ರವರ ಫ್ಯಾಕ್ಸ ಸಂದೇಶ ಸಂ:CRM-5/69/YDG/2023 Dated:18-06-2024 & ಮಾನ್ಯ ಪೊಲೀಸ್ ಅಧೀಕ್ಷಕರು ಯಾದಗಿರಿ ರವರ ಜ್ಞಾಪನ ಪತ್ರ ಸಂಖ್ಯೆ:1393/ಡಿಸಿಆರ್‌ಬಿ/ಯಾಜಿ/2024 ದಿನಾಂಕ:19-06-2024 | ಸದರಿ ಪ್ರಕರಣದ ತನಿಖೆಯನ್ನು ಮಾನ್ಯ ಸಿ.ಐ.ಡಿ ಕಛೇರಿ ಬೆಂಗಳೂರು ರವರಲ್ಲಿ ಸಲ್ಲಿಸಲಾಗಿರುತ್ತದೆ. |

| | | | | | | | |
|---|---|---|---|---|---|---|---|
| | | | | | ನೀಡದೇ ಅವರಿಗೆ ಮೋಸ, ವಂಚನೆ ಮಾಡಿರುತ್ತಾರೆ. | | |
| 2 | ಯಾದಗಿರಿ ನಗರ ಠಾಣೆ | 83/2020 ಕಲಂ 417, 419 ಸಂ 34 ಐಪಿಸಿ | ಶ್ರೀ ಮಂಜುನಾಥ ಆರ್.ವಿ ಪಿ.ಐ ಎಸ್.ಸಿ.ಆರ್.ಬಿ ಬೆಂಗಳೂರು ಕ್ಯಾಂಪ ಯಾದಗಿರಿ | ಎ1) ದೇವರಾಜ ತಂದೆ ಮಲ್ಲಪ್ಪ ಹೆಗ್ಗಣಗೇರಿ ವ;30 ಜಾ; ಮಾದಿಗ ಉ; ಪೊಲೀಸ ಕಾನ್ಸ್‌ಟೇಬಲ್ ಸಾ; ಕದ್ರಾಪೂರ ತಾ; ವಡಗೇರಾ ಜಿ; ಯಾದಗಿರಿ ಎ2) ಮರೆಪ್ಪ ತಂದೆ ಮಲ್ಲಪ್ಪ ಹೆಗ್ಗಣಗೇರಿ ವ; 21 ಜಾ; ಮಾದಿಗ ಉ; ವಿಧ್ಯಾರ್ಥಿ ಸಾ; ಕದ್ರಾಪೂರ ತಾ; ವಡಗೇರಾ ಜಿ; ಯಾದಗಿರಿ | ದಿನಾಂಕ: 20/09/2020 ರಂದು ನಡೆದ ಪೊಲೀಸ್ ಕಾನ್ಸಟೇಬಲ್ (ಸಿವಿಲ್) (ಕಲ್ಯಾಣ ಕರ್ನಾಟಕ) (ಪುರುಷ & ಮಹಿಳಾ) 558 ಹುದ್ದೆಗಳ ಲಿಖಿತ ಪರೀಕ್ಷೆ ಕಾಲಕ್ಕೆ ಯಾದಗಿರಿ ನಗರದ ಹತ್ತಿಕುಣಿ ರಸ್ತೆಯಲ್ಲಿರುವ ಶ್ರೀ ಮಹಾತ್ಮಗಾಂಧಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಆರೋಪಿತರಾದ ದೇವರಾಜ ತಂದೆ ಮಲ್ಲಪ್ಪ ಹೆಗ್ಗಣಗೇರಿ ಪೊಲೀಸ್ ಕಾನ್ಸಟೇಬಲ್ ಮತ್ತು ಮರೆಪ್ಪ ತಂದೆ ಮಲ್ಲಪ್ಪ ಹೆಗ್ಗಣಗೇರಿ ಸಾ; ಇಬ್ಬರೂ ಕದರಾಪೂರ ಗ್ರಾಮ ತಾ; ವಡಗೇರಾ ಜಿ:ಯಾದಗಿರಿ ರವರು ಲಿಖಿತ ಪರೀಕ್ಷೆ ಬರೆಯಲೂ ಕುಳಿತು ವಂಚನೆ ಮಾಡಿದ್ದರಿಂದ ಇರುತ್ತದೆ. | 29/01/2021 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| 3 | ಯಾದಗಿರಿ ನಗರ ಠಾಣೆ | 144/2023 ಕಲಂ 109, 114, 120(ಬಿ), 420, ಸಂ 149 ಐಪಿಸಿ | ಶ್ರೀ ಮಲ್ಲಿಕಾರ್ಜುನ ತಂದೆ ಸಂಗಣ್ಣ ಅಂಗಡಿ, ವಯಸ್ಸು:58 ವರ್ಷ, ಜಾತಿ:ಲಿಂಗಾಯತ, ಉ॥ಪ್ರಾಂಶುಪಾಲರು, ನ್ಯೂ ಕನ್ನಡ ಪಿ.ಯು.ಕಾಲೇಜ ೨ ಯಾದಗಿರಿ | ಎ1).ಸಿದ್ರಾಮ ತಂದೆ ರಾಜಕುಮಾರ ಖಾನಾಪೂರ, ಸಾ॥ಸೊನ್ನ, ತಾ॥ಅಫಜಲಪೂರ ಎ2).ಸಾಗರ ತಂದೆ ಭೀಮರಾಯ ಜಮಾದಾರ, ಸಾ॥ಚಿಂಚೋಳಿ, ತಾ॥ಅಫಜಲಪೂರ ಎ3).ನಿರಂಜನ ತಂದೆ ಮಲ್ಲಿಕಾರ್ಜುನ ಸರಡಗಿ, ಸಾ॥ಹಿರೇ ರಾಜಾಪೂರ ಕಲಬುರಗಿ ಎ4)ಶ್ರೀಶೈಲ್ ತಂದೆ ಸಾಯಿಬಣ್ಣ ಸೊನ್ನ, ವಯ:25 ವರ್ಷ, ಜಾತಿ:ಕಬ್ಬಲಿಗ, ಉ॥ವಿದ್ಯಾರ್ಥಿ, ಸಾ॥ದೇವಣಗಾಂವ್, ತಾ॥ಸಿಂಧಗಿ, ಜಿ॥ವಿಜಯಪುರ<br><br>ಎ5)ಬಸವರಾಜ ತಂದೆ ತುಕರಾಮ ಅಂಕಲಗಿ, ವಯ:26 ವರ್ಷ, ಜಾತಿ:ಲಿಂಗಾಯತ, ಉ॥ಎಫ್.ಡಿ.ಎ. ಉಪಖಜಾನೆ, ವಡಗೇರಾ, ಸಾ॥ಸೊನ್ನ, ತಾ॥ಅಫಜಲಪೂರ, ಜಿ॥ಕಲಬುರಗಿ | ದಿನಾಂಕ 28/10/2023 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿವಿಧ ನಿಗಮ ಮಂಡಳಿಗಳ ನೇಮಕಾತಿ ಪರೀಕ್ಷೆ ಸದರಿ ಪರೀಕ್ಷಾರ್ಥಿಯು ಪರೀಕ್ಷೆ ಬರೆಯುವ ಸಮಯದಲ್ಲಿ ಪರೀಕ್ಷಾ ಸಮಯದಲ್ಲಿ ನಿಷೇಧಿಸಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಸಿಮ್ ಕಾರ್ಡಗಳನ್ನು ಮತ್ತು ಕಿವಿಯಲ್ಲಿ ಬ್ಲ್ಯೂ-ಟೂಥ್ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಮೋಸವೆಸಗಿ ಅಕ್ರಮ ಮಾರ್ಗದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯಲು ಪ್ರಯತ್ನಿಸಿದ್ದು ಸದರಿಯವನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ದೂರು ನೀಡಿದ್ದು ಇರುತ್ತದೆ. | 11/11/2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| 4 | ಯಾದಗಿರಿ ನಗರ ಠಾಣೆ | 145/2023 ಕಲಂ 109, 114, 120(ಬಿ), 420, ಸಂ 149 ಐಪಿಸಿ | ಶ್ರೀಮತಿ.ನಿರ್ಮಲಾ ಗಂಡ ದತ್ತಪ್ಪ ಸಿನ್ನೂರ, ಪ್ರಾಂಶುಪಾಲರು ಸರಕಾರಿ ಬಾಲಕೀಯರ ಪದವಿ ಪೂರ್ವ ಕಾಲೇಜು ಯಾದಗಿರಿ | ಎ1).ಸಂತೋಷ ತಂದೆ ಶರಣಪ್ಪ ಸೊನ್ನ, ಸಾ॥ಹಳಗಿ, ತಾ॥ಅಫಜಲಪೂರ<br>ಎ2).ಬಾಬುರಾವ್ ತಂದೆ ಪೀರಣ್ಣ ಸೊನ್ನ, ಸಾ॥ಡೊಣ್ಣೂರು, ತಾ॥ಅಫಜಲಪೂರ, ಜಿ॥ಕಲಬುರಗಿ<br>ಎ3). ಓಂಕಾರ ತಂದೆ ಪೀರಪ್ಪ@ಪೀರಣ್ಣ ಸೊನ್ನ, ವಯ: 28, ಜಾ: ಕಬ್ಬಲಿಗ, ಉ: ಕೂಲಿ ಕೆಲಸ, ಸಾ॥ ಡೊಣ್ಣೂರು ಗ್ರಾಮ, ತಾ॥ಅಫಜಲಪೂರ, ಜಿ॥ ಕಲಬುರಗಿ. ಮೊ.ನಂ 8495813882<br>ಎ4).ನಾಮಕಾರ ತಂದೆ ಪೀರಪ್ಪ@ಪೀರಣ್ಣ ಸೊನ್ನ, ವಯ: 22, ಜಾ: ಕಬ್ಬಲಿಗ, ಉ: ಕೂಲಿ ಕೆಲಸ, ಸಾ॥ ಡೊಣ್ಣೂರು ಗ್ರಾಮ, ತಾ॥ಅಫಜಲಪೂರ, ಜಿ॥ ಕಲಬುರಗಿ. ಮೊ.ನಂ 7022806441<br>ಎ5). ಪ್ರಭುಲಿಂಗ ತಂದೆ ರಾಜಕುಮಾರ ಕುಂಬಾರ, ವಯ: 28, ಸಾ॥ ಡೊಣ್ಣೂರು ಗ್ರಾಮ, ತಾ॥ಅಫಜಲಪೂರ, ಜಿ॥ ಕಲಬುರಗಿ. ಮೊ.ನಂ 7620994785<br>ಎ6). ರಾಹುಲ್ ತಂದೆ ಶಿವಶರಣ ಬಸರಿಗಿಡ, ವಯ: 26, ಜಾ: ಎಸ್.ಸಿ. ಸಾ॥ ಚಂಚೋಳಿ ಗ್ರಾಮ, | ದಿನಾಂಕ 28/10/2023 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿವಿಧ ನಿಗಮ ಮಂಡಳಿಗಳ ನೇಮಕಾತಿ ಪರೀಕ್ಷೆ ಸದರಿ ಪರೀಕ್ಷಾರ್ಥಿಯು ಪರೀಕ್ಷೆ ಬರೆಯುವ ಸಮಯದಲ್ಲಿ ಪರೀಕ್ಷಾ ಸಮಯದಲ್ಲಿ ನಿಷೇಧಿಸಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಸಿಮ್ ಕಾರ್ಡಗಳನ್ನು ಮತ್ತು ಕಿವಿಯಲ್ಲಿ ಬ್ಲೂ-ಟೂಥ್ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಮೋಸವೆಸಗಿ ಅಕ್ರಮ ಮಾರ್ಗದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯಲು ಪ್ರಯತ್ನಿಸಿದ್ದು ಸದರಿಯವನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ದೂರು ನೀಡಿದ್ದು ಇರುತ್ತದೆ. | 11/11/2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| 5 | ಯಾದಗಿರಿ ನಗರ ಠಾಣೆ | 146/2023 ಕಲಂ 109, 114, 120(ಬಿ), 420, ಸಂ 149 ಐಪಿಸಿ | ಶ್ರೀ ನೆಹರು ತಂದೆ ಕೃಷ್ಣಪ್ಪ ಮೈಲಿ, ವಯ:59 ವರ್ಷ, ಜಾತಿ:ಕುರಿಹಿನಶೆಟ್ಟಿ ಉ॥ಪ್ರಾಂಶುಪಾಲರು ಬಾಲಕರ ಪದವಿ ಪೂರ್ವ ಕಾಲೇಜ್ ಗುರುಮಟಕಲ್ ಸಾ॥ಚಂಡರಕಿ, ತಾ॥ಗುರುಮಿಟಕಲ | ಎ1)ಹಸನಸಾಬ್ ತಂದೆ ಮಹೆಬೂಬಸಾಬ ಮುಳ್ಳೊಳ್ಳಿ ಸಾ॥ಜೆರಟಗಿ, ತಾ॥ಜೇವರ್ಗಿ, ಜಿ॥ಕಲಬುರಗಿ<br>ಎ2)ರಾಕೇಶ ತಂದೆ ಸುರೇಶ ಬಿರಾದಾರ ಸಾ॥ಬಸವೇಶ್ವರಚೌಕ್ ಅಫಜಲಪೂರ | ದಿನಾಂಕ 28/10/2023 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿವಿಧ ನಿಗಮ ಮಂಡಳಿಗಳ ನೇಮಕಾತಿ ಪರೀಕ್ಷೆ ಸದರಿ ಪರೀಕ್ಷಾರ್ಥಿಯು ಪರೀಕ್ಷೆ ಬರೆಯುವ ಸಮಯದಲ್ಲಿ ಪರೀಕ್ಷಾ ಸಮಯದಲ್ಲಿ ನಿಷೇಧಿಸಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಸಿಮ್ ಕಾರ್ಡಗಳನ್ನು ಮತ್ತು ಕಿವಿಯಲ್ಲಿ ಬ್ಲೂ-ಟೂಥ್ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಮೋಸವೆಸಗಿ ಅಕ್ರಮ ಮಾರ್ಗದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯಲು ಪ್ರಯತ್ನಿಸಿದ್ದು ಸದರಿಯವನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ದೂರು ನೀಡಿದ್ದು ಇರುತ್ತದೆ. | 11/11/2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |
| 6 | ಯಾದಗಿರಿ ನಗರ ಠಾಣೆ | 147/2023 ಕಲಂ 109, 114, 120(ಬಿ), 420, ಸಂ 149 ಐಪಿಸಿ | ಶ್ರೀ ಮಹಾಂತೇಶ ತಂದೆ ಹನುಮಯ್ಯ ಕಲಾಲ್, ಪ್ರಾಂಶುಪಾಲರು ಸರಕಾರಿ ಪದವಿಪೂರ್ವ ಕಾಲೇಜು ಬಳಿಚಕ್ರ | ಎ1). ಬಾಬುರಾವ್ ತಂದೆ ಹುಲ್ಲಪ್ಪ ಜಮಾದಾರ್, ಸಾ॥ಬಾದನಹಳ್ಳಿ, ತಾ॥ಅಫಜಲಪೂರ<br>ಎ2). ಅಂಬರೀಶ್ ತಂದೆ ಹುಲ್ಲಪ್ಪ ಜಮಾದಾರ್, ಸಾ॥ಬಾದನಹಳ್ಳಿ, ತಾ॥ಅಫಜಲಪೂರ | ದಿನಾಂಕ 28/10/2023 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿವಿಧ ನಿಗಮ ಮಂಡಳಿಗಳ ನೇಮಕಾತಿ ಪರೀಕ್ಷೆ ಸದರಿ ಪರೀಕ್ಷಾರ್ಥಿಯು ಪರೀಕ್ಷೆ ಬರೆಯುವ ಸಮಯದಲ್ಲಿ ಪರೀಕ್ಷಾ ಸಮಯದಲ್ಲಿ ನಿಷೇಧಿಸಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಸಿಮ್ | 11/11/2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| | | | | | ಕಾರ್ಡಗಳನ್ನು ಮತ್ತು ಕಿವಿಯಲ್ಲಿ ಬ್ಲೂ-ಟೂಥ್ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಮೋಸವೆಸಗಿ ಅಕ್ರಮ ಮಾರ್ಗದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯಲು ಪ್ರಯತ್ನಿಸಿದ್ದು ಸದರಿಯವನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ದೂರು ನೀಡಿದ್ದು ಇರುತ್ತದೆ. | | |
| 7 | ಯಾದಗಿರಿ ನಗರ ಠಾಣೆ | 148/2023 ಕಲಂ 109, 114, 120(ಬಿ), 420, ಸಂ 149 ಐಪಿಸಿ | ಶ್ರೀ ಮಲ್ಲಿಕಾರ್ಜುನ ತಂದೆ ಮಲ್ಲಪ್ಪ ಹೊಸಮನಿ, ಪ್ರಾಂಶುಪಾಲರು ಸರಕಾರಿ ಬಾಲಕೀಯರ ಪದವಿ ಪೂರ್ವ ಕಾಲೇಜು ಗುರುಮಿಟಕಲ್ | ಎ1). ಪ್ರವೀಣ ತಂದೆ ಪ್ರಭಾಕರ್ ಪೋದ್ದಾರ್, ಸಾ॥ಆಲಮೇಲ್, ತಾ॥ಸಿಂಧಗಿ, ಜಿ॥ವಿಜಯಪುರ<br><br>ಎ2). ಭೀಮಶಂಕರ ತಂದೆ ಶಿವರಾಯ ಕೋಟಾರಗಸ್ತಿ, ವಯ:21, ಜಾ: ತಳವಾರ, ಉ: ಗುತ್ತಿಗೆದಾರ, ಸಾ॥ ಬಸವನಗರ, ಅಲಮೇಲ್, ತಾ॥ ಅಲಮೇಲ್, ಜಿ॥ ವಿಜಯಪುರ | ದಿನಾಂಕ 28/10/2023 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿವಿಧ ನಿಗಮ ಮಂಡಳಿಗಳ ನೇಮಕಾತಿ ಪರೀಕ್ಷೆ ಸದರಿ ಪರೀಕ್ಷಾರ್ಥಿಯು ಪರೀಕ್ಷೆ ಬರೆಯುವ ಸಮಯದಲ್ಲಿ ಪರೀಕ್ಷಾ ಸಮಯದಲ್ಲಿ ನಿಷೇಧಿಸಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಸಿಮ್ ಕಾರ್ಡಗಳನ್ನು ಮತ್ತು ಕಿವಿಯಲ್ಲಿ ಬ್ಲೂ-ಟೂಥ್ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಮೋಸವೆಸಗಿ ಅಕ್ರಮ ಮಾರ್ಗದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯಲು ಪ್ರಯತ್ನಿಸಿದ್ದು ಸದರಿಯವನ | 11/11/2023 | ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| | | | | | ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ದೂರು ನೀಡಿದ್ದು ಇರುತ್ತದೆ. | | |
| 8 | ಯಾದಗಿರಿ ನಗರ ಠಾಣೆ | 105/2024 ಕಲಂ 352, 108, 3(5), ಬಿಎನ್‌ಎಸ್ ಕಾಯ್ದೆ & ಕಲಂ 3(2)(ವಿ), 3(1)(ಆರ್)(ಎಸ್) ಎಸ್.ಸಿ/ಎಸ್.ಟಿ ಕಾಯ್ದೆ | ಶ್ರೀಮತಿ ಶ್ವೇತಾ ಎನ್.ವಿ ಗಂಡ ದಿ॥ ಪರಶುರಾಮ, ವಯ: 29, ಜಾ: ಎಸ್.ಸಿ, ಉ: ಮನೆ ಕೆಲಸ, ಸಾ॥ ರಾಯಚೂರು | ಎ1) ಚನ್ನಾರೆಡ್ಡಿ ತುನ್ನೂರು, ಶಾಸಕರು ಯಾದಗಿರಿ ವಿಧಾನ ಸಭಾ ಮತಕ್ಷೇತ್ರಎ2) ಪಥಮನಗೌಡ ತಂದೆ ಚನ್ನಾರೆಡ್ಡಿ ತುನ್ನೂರು ಸಾ॥ ಯಾದಗಿರಿ | ಪಿರ್ಯಾದಿದಾರರ ಗಂಡ ಪರಶುರಾಮ ಇವರನ್ನು ಅವಧಿಪೂರ್ಣಗಿಂತ ಮೊದಲೆ ಅಂದರೆ 7 ತಿಂಗಳಲ್ಲೆ ಯಾದಗಿರಿ ನಗರ ಠಾಣೆಯಿಂದ ಯಾದಗಿರಿ ಶಾಸಕರಾದ ಚನ್ನಾರೆಡ್ಡಿ ತುನ್ನೂರು ಮತ್ತು ಆತನ ಮಗನಾದ ಸನ್ನಿಗೌಡ ಇವರು 30 ಲಕ್ಷ ಹಣಕ್ಕೆ ಬೇಡಿಕೆ ಇಟ್ಟು ಜಾತಿ ನಿಂದನೆ ಮಾಡಿ ಬೈಯ್ದು ಅವಮಾನ ಮಾಡಿ ವರ್ಗಾವಣೆ ಮಾಡಿದ್ದರಿಂದ ನನ್ನ ಗಂಡ ಪರಶುರಾಮ ಮಾನಸಿಕವಾಗಿ ನೊಂದು ಖಿನ್ನತೆಗೆ ಒಳಗಾಗಿ ದಿನಾಂಕ 02/08/2024 ರಂದು ಮೃತಪಟ್ಟಿದ್ದು ಈ ಬಗ್ಗೆ ಪರಶುರಾಮ ಪಿಎಸ್‌ಐ ರವರ ಸಾವಿಗೆ ಕಾರಣರಾದ ಯಾದಗಿರಿ ಶಾಸಕರಾದ ಚನ್ನಾರೆಡ್ಡಿ ತುನ್ನೂರ ಮತ್ತು ಅವರ ಮಗ ಸನ್ನಿಗೌಡ ಇವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗಿ ನೀಡಿದ ದೂರಿನ ಸಾರಾಂಶ | 03/08/2024 | ಮಾನ್ಯ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿಯನ್ನು ಸಲ್ಲಿಸಿದ್ದು ಇರುತ್ತದೆ. |

| | | | | | | | |
|---|---|---|---|---|---|---|---|
| | | | | | ಇರುತ್ತದೆ. | | |
| 9 | ಶಹಾಪೂರ ಠಾಣೆ | 72/2023 ಕಲಂ 420, 463, 464, 468 ಸಂಗಡ 149 | ಶ್ರೀ ಬಸವರಾಜ ತಂದೆ ಕರಬಸಪ್ಪ ಆರುಣಿ ಉಃ ಸಾಮಾಜಿಕ ಕಾರ್ಯಕರ್ತ ಸಾಃ ಆನೆಗುಂದಿ ಓಣಿ ಶಹಾಪೂರ | ಬಸವರಾಜ ತಂದೆ ಗುರುಲಿಂಗಯ್ಯ ಹಿರೇಮಠ, ವಯಸ್ಸು 60 ವರ್ಷ, ಉಃ ಅಧ್ಯಕ್ಷರು ಕೃಷ್ಣ ಪಟ್ಟಣ ಸಹಕಾರ ಬ್ಯಾಂಕ್ ಶ್ರೀ ಬಸವೇಶ್ವರ ಗಂಜ್ ಕೃಷಿ ಉತ್ಪನ್ನ ಮಾರುಕಟ್ಟೆ ಯಾದಗಿರಿ ರಸ್ತೆ ಸಾಃ ಶಹಾಪೂರ. ಸಂಗಡ 18 ಜನರು. | ಕೃಷ್ಣ ಪಟ್ಟಣ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿಯ ಬ್ಯಾಂಕಿನ ಅಧ್ಯಕ್ಷ ಆರೋಪಿ ನಂ. 1) ಬಸವರಾಜ ತಂದೆ ಗುರುಲಿಂಗಯ್ಯ ಹಿರೇಮಠ್, ಹಾಗೂ ಉಪಾಧ್ಯಕ್ಷ ಆರೋಪಿ ನಂ. 2) ಚನ್ನಪ್ಪಗೌಡ ತಂದೆ ಸಿದ್ದಣ್ಣಗೌಡ ಪಾಟೀಲ್, ಅಲ್ಲದೇ ಆ ಡಳಿತ ಮಂಡಳಿಯ ನಿರ್ದೇಶಕರಾದ ಆರೋಪಿ ನಂ. 3 ರಿಂದ 15 ನೇದ್ದವರು ಮತ್ತು ಆರೋಪಿ ನಂ. 16 ರಿಂದ 19 ರವರು ಬ್ಯಾಂಕಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರು ಅಕ್ರಮದಲ್ಲಿ ಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಮಾಡಿ ಷೇರುದಾರ ಸದಸ್ಯರ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ | 17/04/2023 | ಪ್ರಕರಣವು ಸಿ.ಐ.ಡಿ ತನಿಖೆಯಲ್ಲಿರುತ್ತದೆ. |
| 10 | ಗೋಗಿ ಠಾಣೆ | 68/2022 ಕಲಂ: 120(ಬಿ), 167, 406, 420 ಐಪಿಸಿ | ಶ್ರೀ ವೆಂಕಟೇಶ ತಂದೆ ಈರಣ್ಣ ಮಕಾಸಿ ಗುತ್ತಿಗೆದಾರರು ಸಾ:ಆಲ್ದಾಳ ತಾ:ಶಹಾಪೂರ | 1) ನಾಗಪ್ಪ ತಂದೆ ದೇವಪ್ಪ ವಕಾರ ಗುತ್ತಿಗೆದಾರರು ಸಾ:ವಜ್ಜಲ 2) ತಿಮ್ಮಪ್ಪ ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿನಿ | ದಿನಾಂಕ: 09/09/2022 ರಂದು 08.30 ಪಿ.ಎಮ್ ಕ್ಕೆ ಕೋರ್ಟ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರಾದ ಶ್ರೀ ನಾಗಪ್ಪ ಪಿಸಿ 167 ರವರು | 17/02/2023 | "ಬಿ" ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. |

| | | | | | | | |
|---|---|---|---|---|---|---|---|
| | | | | ಖಾನಾಪೂರ | ಮಾನ್ಯ ಜೆ.ಎಮ್.ಎಫ್.ಸಿ ನ್ಯಾಯಾಲಯ ಶಹಾಪೂರ ರವರ ಖಾಸಗಿ ದಾವೆ ನಂ:79/2022 ನೇದ್ದನ್ನು ಮುಂದಿನ ಕ್ರಮಕ್ಕಾಗಿ ಹಾಜರಪಡಿಸಿದ್ದು, ಸದರಿ ಖಾಸಗಿ ದಾವೆಯ ಸಾರಾಂಶವೇನೆಂದರೆ, ಫಿರ್ಯಾದದಾರರಾದ ವೆಂಕಟೇಶ ಮಕಾಸಿ ಸಾ:ಆಲ್ದಾಳ ಇವರ ಗ್ರಾಮದ ಮತ್ತು ಶಹಹಾಪೂರ ತಾಲುಕು , ವಡಗೇರಾ ತಾಲೂಕಿನಲ್ಲಿ ಹಾದು ಹೋದಂತಹ ಎಸ್.ಬಿ.ಸಿ ಮೇನ್ ಕೆನಾಲ ರಿಪೇರಿ , ನವೀಕರಣ ಕಾಮಗಾರಿ ಕೆಲಸವನ್ನು ಮಾಡಲು ಆರೋಪಿ ನಂ 1 ರವರು ಅರ್ಹರಾಗಿರದಿದ್ದರೂ ಸದರಿಯವರಿಗೆ ಟೆಂಡರ್ ಆಗಲು ಟೆಂಡರ್ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಆರೋಪಿ ನಂ 1 ರವರಿಗೆ ಟೆಂಡರ್ ಮಂಜೂರಾಗಲು ಆರೋಪಿ ನಂ 2 ರವರು ಸಹಕರಿಸಿದ್ದು, ಕಾಮಗಾರಿ ಗೆ ಬಳಸಬೇಕಾದ 15000/- ಕ್ಯೂಬಿಕ್ ಮೀಟರ್ ಮರಳನ್ನು ಬಳಸದೇ | | |

| | | | | | | | |
|---|---|---|---|---|---|---|---|
| | | | | | ಕೇವಲ 174 ಕ್ಯೂಬಿಕ್ ಮೀಟರ್ ಮರಳನ್ನು ಬಳಕೆ ಮಾಡಿ ಕಳಪೆ ಕಾಮಗಾರಿ ಮಾಡಿ ಸರಕಾರಕ್ಕೆ 1,98,00,00,000/- ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಹಣವನ್ನು ಲೂಟಿಮಾಡಿ ಸರಕಾರಕ್ಕೆ ಮೋಸ ಮಾಡಿರುತ್ತಾರೆ | | |

# ಅನುಬಂಧ-ಸಿ

## ಕಲಬುರಗಿ ಜಿಲ್ಲೆ, ಠಾಣಾವಾರು ವಿವರ:

| POLICE STATION | 1 Star | 2 Star | 3 Star | 4 Star | 5 Star | Total |
|---|---|---|---|---|---|---|
| Afzalpur PS | 2 | 1 | | | 17 | 20 |
| Aland PS | 4 | 2 | 1 | 3 | 37 | 47 |
| CEN PS Kalaburagi | 9 | 4 | 2 | 9 | 384 | 408 |
| Chincholli PS | 5 | | | | 43 | 48 |
| Chittapur PS | 10 | 9 | 24 | | 232 | 275 |
| DG pur PS | | | | | 6 | 6 |
| Jewargi PS | 4 | | | 2 | 12 | 18 |
| Kalagi PS | 1 | | | 3 | 26 | 30 |
| Kamalapur PS | 3 | | | 1 | 46 | 50 |
| Kunchawaram PS | 1 | | 1 | 1 | 10 | 13 |
| Kurkunta PS | | | | | 4 | 4 |
| Madabool PS | 3 | 1 | | 7 | 56 | 67 |
| Madan Hipparga PS | | | 1 | | 12 | 13 |
| Mahagaon PS | 3 | 1 | 1 | 1 | 20 | 26 |
| Malkhed PS | 1 | | | 1 | 31 | 33 |
| Miriyana PS | | | | | 2 | 2 |
| Mudhol PS | 2 | | 2 | 4 | 132 | 140 |
| Narona PS | 2 | | 1 | | 6 | 9 |
| Nellogi PS | 2 | 1 | | 1 | 15 | 19 |
| Nimbarga PS | 1 | | | 1 | 6 | 8 |
| Ratkal PS | 3 | | | 2 | 23 | 28 |
| Revoor PS | 1 | | | 1 | 13 | 15 |
| Sedam PS | 2 | 1 | 1 | 2 | 19 | 25 |
| Shahabad PS | 2 | | 1 | 1 | 50 | 54 |
| Sulepeth PS | 1 | | 1 | 3 | 51 | 56 |
| Wadi PS | 3 | | | 3 | 27 | 33 |
| Women PS Kalaburagi | 2 | 1 | 1 | 2 | 25 | 31 |
| Yedrami PS | 1 | 1 | | 3 | 30 | 35 |
| TOTAL | 68 | 22 | 37 | 51 | 1335 | 1513 |

## ಯಾದಗಿರಿ ಜಿಲ್ಲೆ ಠಾಣಾವಾರು ವಿವರ:

| SP Yadgiri District Loka Spandana Feedbacks Statistics Report 01-01-2023 To 31-12-2023 | | | | | |
|---|---|---|---|---|---|
| **Police Station Name** | **5 Star** | **4 Star** | **3 Star** | **2 Star** | **1 Star** |
| Saidapur PS | 49 | 0 | 1 | 0 | 0 |
| Kodekal PS | 72 | 5 | 0 | 0 | 0 |
| Bheemrayangudi PS Yadgiri District | 81 | 0 | 0 | 1 | 0 |
| Yadgiri Women PS | 52 | 39 | 0 | 0 | 0 |
| Narayanpur PS Yadgiri District | 100 | 1 | 0 | 0 | 0 |
| Gurmitkal PS Yadgiri District | 105 | 4 | 0 | 0 | 0 |
| CEN Crime PS Yadgiri | 120 | 19 | 1 | 0 | 0 |
| Hunsagi PS Yadgiri District | 167 | 0 | 0 | 0 | 0 |
| Shorapur PS | 202 | 0 | 1 | 0 | 0 |
| Gogi PS | 224 | 0 | 1 | 0 | 2 |
| Yadgiri Rural PS | 235 | 5 | 3 | 0 | 0 |
| Wadigere PS Yadgiri District | 265 | 5 | 0 | 0 | 0 |
| Yadgiri Traffic PS | 264 | 16 | 0 | 0 | 0 |
| Yadgiri Town PS | 721 | 2 | 0 | 0 | 0 |
| Kembhavi PS | 842 | 1 | 0 | 0 | 1 |
| Shahapur PS Yadgiri District | 1110 | 107 | 0 | 1 | 4 |
| **TOTAL** | **4609** | **204** | **7** | **2** | **7** |

| SP Yadgiri District Loka Spandana Feedbacks Statistics Report 01-01-2024 To 31-12-2024 | | | | | |
|---|---|---|---|---|---|
| Police Station Name | 5 Star | 4 Star | 3 Star | 2 Star | 1 Star |
| Yadgiri Women PS | 83 | 53 | 1 | 0 | 0 |
| Narayanpur PS Yadgiri District | 272 | 1 | 0 | 0 | 1 |
| CEN Crime PS Yadgiri | 258 | 20 | 0 | 0 | 0 |
| Gurmitkal PS Yadgiri District | 241 | 55 | 0 | 0 | 1 |
| Yadgiri Traffic PS | 458 | 6 | 0 | 0 | 0 |
| Kodekal PS | 373 | 89 | 0 | 1 | 3 |
| Saidapur PS | 434 | 32 | 1 | 0 | 0 |
| Bheemrayangudi PS Yadgiri District | 559 | 10 | 2 | 0 | 0 |
| Kembhavi PS | 733 | 5 | 0 | 0 | 1 |
| Hunsagi PS Yadgiri District | 711 | 46 | 0 | 0 | 1 |
| Wadigere PS Yadgiri District | 758 | 60 | 8 | 0 | 0 |
| Gogi PS | 1001 | 1 | 0 | 0 | 2 |
| Shorapur PS | 1077 | 35 | 0 | 1 | 1 |
| Yadgiri Rural PS | 1449 | 256 | 3 | 2 | 0 |
| Yadgiri Town PS | 2323 | 5 | 0 | 0 | 0 |
| Shahapur PS Yadgiri District | 2906 | 229 | 23 | 1 | 2 |
| **TOTAL** | **13636** | **903** | **38** | **5** | **12** |

| SP Yadgiri District Loka Spandana Feedbacks Statistics Report 01-01-2025 To 13-08-2025 | | | | | |
|---|---|---|---|---|---|
| Police Station Name | 5 Star | 4 Star | 3 Star | 2 Star | 1 Star |
| Yadgiri Women PS | 30 | 3 | 0 | 0 | 0 |
| Gurmitkal PS Yadgiri District | 44 | 29 | 2 | 0 | 0 |
| Gogi PS | 81 | 0 | 1 | 1 | 1 |
| Saidapur PS | 73 | 19 | 0 | 0 | 1 |
| CEN Crime PS Yadgiri | 112 | 1 | 0 | 0 | 0 |
| Kembhavi PS | 131 | 1 | 0 | 0 | 0 |
| Narayanpur PS Yadgiri District | 151 | 1 | 0 | 0 | 0 |
| Yadgiri Traffic PS | 158 | 0 | 0 | 0 | 0 |
| Shorapur PS | 85 | 156 | 0 | 0 | 2 |
| Wadigere PS Yadgiri District | 268 | 20 | 1 | 0 | 0 |
| Hunsagi PS Yadgiri District | 272 | 44 | 0 | 0 | 5 |
| Kodekal PS | 311 | 35 | 3 | 0 | 0 |
| Bheemrayangudi PS Yadgiri District | 362 | 3 | 0 | 0 | 0 |
| Yadgiri Rural PS | 391 | 58 | 0 | 0 | 0 |
| Yadgiri Town PS | 586 | 2 | 0 | 0 | 4 |
| Shahapur PS Yadgiri District | 838 | 52 | 3 | 2 | 6 |
| **TOTAL** | **3893** | **424** | **10** | **3** | **19** |